ಇ) ಮಹಿಳಾ ಉದ್ಯಮಿಗಳ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಯೋಜನೆಗಳಾವುವು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ದಿನಾಂಕ 31 3 2006ರ ಅಂತ್ಯಕ್ಕೆ ರಾಜ್ಯದಲ್ಲಿ 1485 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ ಸದರಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಹೆಚ್ಚಿನವು ಮುಖ್ಯವಾಗಿ ಸ್ಟೀಲ್, ಸಿಮೆಂಟ್, ಸಕ್ಕರೆ ಕಾರ್ಖಾನೆಗಳು ಐ ಟಿ/ಬಿ ಟಿ ಉದ್ಯಮ, ಕೃಷಿ ಆಧಾರಿತ ಕೈಗಾರಿಕೆಗಳು, ಜವಳಿ ಕೈಗಾರಿಕೆಗಳು, ಗ್ರಾನೈಟ್ ಕೈಗಾರಿಕೆಗಳು ಪೆಟ್ರೋ ಕೆಮಿಕಲ್ಸ್, ಕೃಷಿ ಆಧಾರಿತ ಆಹಾರ ಸಂಸ್ಕರಣಾ ಘಟಕಗಳು, ಫಾರ್ಮಾಸ್ಯುಟಿಕಲ್ಸ್, ಫೌಂಡ್ರಿ ಘಟಕಗಳು, ಆಟೋಮೊಬೈಲ್ಸ್, ಇಂಜಿನಿಯರಿಂಗ್ ಘಟಕಗಳು ಪೇಪರ್ ಇತ್ಯಾದಿ ಇರುತ್ತವೆ

ಆ) ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಸಾಮಾನ್ಯವಾಗಿ ಪಬ್ಲಿಕ್ ಲಿಮಿಟೆಡ್/ ಪ್ರೈವೇಟ್ ಲಿಮಿಟೆಡ್ ಕಂಪನಿಗಳಾಗಿದ್ದು, ಈ ಸಂಸ್ಥೆಗಳಲ್ಲಿ ಆಡಳಿತವನ್ನು ನಡೆಸಲು ನಿರ್ದೇಶಕ ಮಂಡಳಿಯಿದ್ದು ಮಹಿಳೆಯರು ಕೆಲವು ಕಂಪನಿಗಳಲ್ಲಿ ನಿರ್ದೇಶಕರು/ ವ್ಯವಸ್ಥಾಪಕ ನಿರ್ದೇಶಕರು / ಪ್ರವರ್ಧಕರಿರಬಹುದು

ಇ) ಸರ್ಕಾರವು 2006–11ರ ಅವಧಿಗೆ ನೂತನ ಕೈಗಾರಿಕೆ ನೀತಿಯನ್ನು ಘೋಷಿಸಿದ್ದು ಮಹಿಳೆಯರು ಸಣ್ಣ ಕೈಗಾರಿಕೆಗಳಲ್ಲಿ ಹೂಡುವ ಬಂಡವಾಳಕ್ಕೆ ಸಾಮಾನ್ಯ ಸಹಾಯಧನ ಅಲ್ಲದೆ ವಿಶೇಷ ಶೇಕಡ 5ರಷ್ಟು ಹೆಚ್ಚುವರಿ ಸಹಾಯಧನ ಗರಿಷ್ಟ ರೂ 5 00 ಲಕ್ಷಗಳನ್ನು ಪ್ರತಿ ಘಟಕಕ್ಕೆ ನೀಡಲಾಗುವುದು ಸರ್ಕಾರವು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಅವೇಕ್ ಸಂಸ್ಥೆಗೆ ಸಹಕಾರ ನೀಡುತ್ತಿದೆ

800 (993) ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಚಾಮರಾಜ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ನೀರಾವರಿ ಹಾಗೂ ಅಂತರ ಜಲವನ್ನು ಉತ್ತಮಪಡಿಸುವಲ್ಲಿ ಸರ್ಕಾರದ ಮುಂದಿರುವ ಯೋಜನೆಗಳಾವುವು ,

ಆ) ಹಾಗಿಲ್ಲದಿದ್ದಲ್ಲಿ ಅಂತರ ಜಲಾಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲವೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯು 40 ಹೆಕ್ಟೇರ್‌ನಿಂದ 2000 ಹೆಕ್ಟೇರ್‌ವರೆಗಿನ ಪ್ರದೇಶದ ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಕೆಲಸಗಳನ್ನು ಕೈಗೊಳ್ಳುತ್ತಿದೆ, ಇದಲ್ಲದೆ, ಪರೋಕ್ಷವಾಗಿ ನೀರಾವರಿಗೆ

ಅನುಕೂಲವಾಗುವಂತೆ ಅಂತರ್ಜಲ ಹೆಚ್ಚಿಸಲು ಇಂಗುಕೆರೆ ನಿರ್ಮಾಣವನ್ನು ಸಹ ಕೈಗೊಳ್ಳುತ್ತಿದೆ ಸಣ್ಣ ನೀರಾವರಿ ಇಲಾಖೆಯು ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನದಿಂದ ಕೈಗೊಳ್ಳುತ್ತಿದೆ

1) ನೀರಾವರಿ ಸಾಮರ್ಥ್ಯವನ್ನು ಕಲ್ಪಿಸುವ ಕಾಮಗಾರಿಗಳು
   (ಅ) ಹೊಸಕೆರೆ ನಿರ್ಮಾಣ, ಇಂಗುಕೆರೆ ನಿರ್ಮಾಣ
   (ಅ) ಏತ ನೀರಾವರಿ ಯೋಜನೆಗಳು
   (ಇ) ಅಣೆಕಟ್ಟುಗಳು ಮತ್ತು ಪಿಕಪ್‌ಗಳ ನಿರ್ಮಾಣ
2) ಅಚ್ಚುಕಟ್ಟನ್ನು ಸ್ಥಿರಗೊಳಿಸುವ ಕಾಮಗಾರಿಗಳು
   (ಅ) ಆಧುನೀಕರಣ ಕಾಮಗಾರಿಗಳು
   (ಆ) ಹಳೆಯ ಮತ್ತು ಒಡೆದ ಕೆರೆಗಳ ಜೀರ್ಣೋದ್ಧಾರ ಮತ್ತು ಹೂಳೆತ್ತುವುದು

ಸಣ್ಣ ನೀರಾರಿ ಇಲಾಖೆಯಲ್ಲಿ ಇಂಗುಕೆರೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಯಾಗುವುದು

ಆ) ಮೇಲೆ ತಿಳಿಸಿದಂತೆ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ, ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಗೆ ಸಹಾಯಕವಾಗುವುದು

ಅಂತರ್ಜಲದ ಯಧೇಚ್ಚವಾದ ಬಳಕೆಯನ್ನು ನಿಯಂತ್ರಿಸುವ ದೃಷ್ಟಿಯಿಂದ "ಕರ್ನಾಟಕ ಅಂತರ್ಜಲ (ಅಬಿವೃದ್ಧಿ ಮತ್ತು ನಿರ್ವಹಣೆಯ ವಿನಿಮಯ ಮತ್ತು ನಿಯಂತ್ರಣ) ವಿದೇಯಕ 2005" ರೂಪಿಸಿದ್ದು, ವಿಧೇಯಕವು ಪರಿಶೀಲನೆಯಲ್ಲಿದೆ ಈ ವಿಧೇಯಕವನ್ನು ಜಾರಿಗೊಳಿಸಿದಲ್ಲಿ ಅಂತರ್ಜಲ ಮಿತಬಳಕೆಯಿಂದಾಗಿ ಅಂರ್ತಜಲ ಅಭಿವೃದ್ಧಿಗೆ ಸಹಾಯಕವಾಗುವುದು

801 (994) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದಿನ ಸರ್ಕಾರ ನಿಲ್ಲಿಸಿದ್ದ ಫ್ಲೇವಿನ್ ಲಾಟರಿಯನ್ನು ಮರು ಪ್ರಾರಂಭಿಸಿದ ಉದ್ದೇಶವೇನು ,

ಆ) ಇದನ್ನು ಹಾಗೂ ಒಂದಂಕಿ ಲಾಟರಿಯನ್ನು ನಿಲ್ಲಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ದಿನಾಂಕ 24 07 2004ರಲ್ಲಿ ರಾಜ್ಯ ಸರ್ಕಾರವು ಆನ್‌ಲೈನ್ ಲಾಟರಿಯನ್ನು ನಿಷೇಧಿಸಿತು ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ

P2
36